# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

### *ಕಂಪನಿಯು ಸತತವಾಗಿ ಲಾಭ ಗಳಿಸುತ್ತಿರುವಾಗ ಆ ಲಾಭದಲ್ಲಿ ಪಾಲು ಪಡೆಯಲು ನಮಗೂ ಕಾನೂನು ಬದ್ಧ ಹಕ್ಕಿದೆ.*

ಆತ್ಮೀಯ ಸಂಗಾತಿಗಳೇ,

ಎವೆರಿ ಡೆನಿಸನ್ ಇಂಡಿಯಾ ಪ್ರೈ.ಲಿ ಕಂಪನಿಯು ತಾನೇ ನೀಡಿದ ದಾಖಲೆಯ ಪ್ರಕಾರ ಸತತವಾಗಿ ಮೂರು ವರ್ಷಗಳಿಂದ, ಅಂದರೆ

- 2014–15 ರಲ್ಲಿ ತೆರಿಗೆಯ ಪೂರ್ವ ಲಾಭ 23 ಕೋಟಿ 65 ಲಕ್ಷ ರೂ
- 2015–16 ರಲ್ಲಿ ತೆರಿಗೆಯ ಪೂರ್ವ ಲಾಬ 48 ಕೋಟಿ 14 ಲಕ್ಷ 25 ಸಾವಿರ ರೂ
- 2016–17 ರಲ್ಲಿ ತೆರಿಗೆಯ ಪೂರ್ವ ಲಾಬ 79 ಕೋಟಿ 32 ಲಕ್ಷ ಒಂಬತ್ತು ಸಾವಿರ ರೂ ಲಾಭಗಳಿಸುತ್ತಾ, ಸತತವಾಗಿ ಲಾಭದಾಯಕವಾಗಿ ಮುನ್ನಡೆದಿದೆ.

ಕಾರ್ಮಿಕರಾದ ನಾವೆಲ್ಲರೂ ಕಂಪನಿಯಲ್ಲಿ ಶ್ರಮವಹಿಸಿ ದುಡಿಯುತ್ತಿರುವುದರಿಂಲೇ ಕಂಪನಿಯು ಸತತವಾಗಿ ಲಾಭದಲ್ಲಿ ಮುನ್ನಡೆಯುತ್ತಿದೆ. ಅಂದರೆ ನಮ್ಮೆಲ್ಲರಿಗೂ ಈ ಲಾಭದ ಪಾಲು ಸಿಗಲೇ ಬೇಕು.

ಕಂಪನಿಯು ಸತತವಾಗಿ ಲಾಭ ಗಳಿಸುತ್ತಿರುವ ಹಿನ್ನೆಲೆಯಲ್ಲಿ GATWU ದಿನಾಂಕ 17.09.2018 ರಂದು ಆಡಳಿತವರ್ಗಕ್ಕೆ ಪತ್ರವನ್ನು ಬರೆದು ಪ್ರತಿಯೊಬ್ಬ ಕಾರ್ಮಿಕರಿಗೂ ನ್ಯಾಯ ಬದ್ಧವಾಗಿ ಮತ್ತು ಕಾನೂನು ಬದ್ಧವಾಗಿ 20% ಬೋನಸ್‌ನ್ನು ಘೋಷಿಸಬೇಕೆಂದು ಮತ್ತು ಈ ವಿಷಯಕ್ಕೆ ಸಂಬಂಧ ಪಟ್ಟಂತೆ GATWU ಜೊತೆ ಚರ್ಚಿಸಬೇಕೆಂದು ಪತ್ರವನ್ನು ಬರೆದಿತ್ತು. ಉತ್ತರ ಏನೂ ಬರಲಿಲ್ಲವಾದ್ದರಿಂದ ದಿನಾಂಕ 13.10.2018 ರಂದು ಮತ್ತೊಂದು ಜ್ಞಾಪನಾ ಪತ್ರವನ್ನು ಬರೆಯಲಾಗಿತ್ತು.

ಆದರೆ ಆಡಳಿತವರ್ಗದವರು ಈ ಪತ್ರಗಳನ್ನು ಪರಿಗಣಿಸದೆ ಏಕಪಕ್ಷೀಯವಾಗಿ ದಿನಾಂಕ 17.10.2018 ರಂದು ಎಂಪ್ಲಾಯಿಗಳಿಗೆ ಒಟ್ಟು ಮೊತ್ತ 17,500 (ಅಂದಾಜು 12%) ಮತ್ತು ಗುತ್ತಿಗೆ ಕಾರ್ಮಿಕರಿಗೆ 8.33% ಕನಿಷ್ಠ ಬೋನಸ್‌ನ್ನು ಘೋಷಿಸಿ ವಿತರಿಸಿದ್ದಾರೆ. ಕಳೆದ ವರ್ಷವೂ ಸರಿಸುಮಾರು ಇಷ್ಟೇ ಪ್ರಮಾಣದ ಅಂದರೆ 12% ಬೋನಸ್ ನೀಡಿದ್ದರು. ಆದರೆ 2015–16 ರಲ್ಲಿ ಸುಮಾರು 15% ರ ಪ್ರಮಾಣದಲ್ಲಿ ಬೋನಸ್‌ನ್ನು ನೀಡಲಾಗಿತ್ತು. ಕಂಪನಿಯು ಹೆಚ್ಚು ಹೆಚ್ಚು ಲಾಭ ಮಾಡುತ್ತಿದ್ದಷ್ಟೂ ಕಾರ್ಮಿಕರಿಗೆ ನೀಡುವ ಬೋನಸ್ ಪ್ರಮಾಣ ಕಡಿಮೆಯಾಗುತ್ತಿರುವುದು ಅಕ್ರಮ, ಅನ್ಯಾಯ ಮತ್ತು ಕಾನೂನು ಬಾಹಿರವಾಗಿದೆ.

ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಪಾಲು ಸಿಗಲೇಬೇಕೆಂದು ನಂಬಿ ಹೋರಾಡುತ್ತಿರುವ GATWU ಈ ಅನ್ಯಾಯದ ಬಗ್ಗೆ ಮುಂದಿನ ದಿನಗಳಲ್ಲಿ ಸಕ್ಷಮ ಪ್ರಾಧಿಕಾರದ ಮುಂದೆ ದಾವೆಯನ್ನು ಹೂಡುತ್ತಿದೆ.

ಕಾರ್ಮಿಕರಿಗೆ ನ್ಯಾಯವಾಗಿ ಸಿಗಬೇಕಾದ ಪಾಲನ್ನು ವಂಚಿಸಿ ತಾನೇ ತಿನ್ನುತ್ತಿರುವ ಆಡಳಿತವರ್ಗಕ್ಕೆ ಧಿಕ್ಕಾರವಿರಲಿ. . . . .

ಕಾರ್ಮಿಕರನ್ನು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿರುವ ಆಡಳಿತವರ್ಗಕ್ಕೆ ಧಿಕ್ಕಾರವಿರಲಿ. . . . .

ಏನೇ ಬರಲಿ ಒಗ್ಗಟ್ಟಿರಲಿ. . . . . GATWU ಜಿಂದಾಬಾದ್

Scanned with OKEN Scanner